# ಮಳೆ ಕಛೇರಿ

ತಂತಿ ಶ್ರುತಿ ಹಿಡಿದಂತೆ ಬಿಟ್ಟೂಬಿಡದ ನಾದ. ಕಂಠ ಹದ ಮಾಡಿಕೊಂಡಂತೆ ಸ್ವರಗಳ ಆಲಾಪ. ಅದೋ ಎದೆದುಂಬಿ ಹಾಡುವ ಭಾವಗೀತ. ಲಕ್ಷ ಲಕ್ಷ ಕಂಠಗಳ ಒಕ್ಕೊರಲ ಗಾನ. ಬೆನ್ನಿಗೆ, ನಿಂಬೀಯ ಬನಾದ ಮ್ಯಾಗಳ ಚಂದ್ರಮ ಚೆಂಡಾಡಿದ ಜನರಪದ. ಮಗ್ಗುಲು ಬದಲಿಸಿದಂತೆ, ಚಂಡೆಮದ್ದಳೆ ನುಡಿದಂತೆ ಯಾವುದದು ತಾರಕಸ್ವರ? ಆಗೊಂದು ಸಿಡಿಲು, ಈಗೊಂದು ಮುಗಿಲು.

ಬಾನವೇದಿಕೆಯಲ್ಲಿ ನಡೆಯುವ ಕಛೇರಿ ಬಹುರೂಪಿ. ಜಗದ ಹಾಡುಗಾರನ ಮನಸ್ಸಿನ ಲಹರಿಗೆ ತಕ್ಕಂತೆ ಭಾವಗೀತೆಯ ಝರಿ, ವಚನ ಗಾನದ ತೊರೆ, ಶಾಸ್ತ್ರೀಯ ಸಂಗೀತದ ನಾದಲೀಲೆ. ಆ ನಾದಲೀಲೆಯೇ ಮಳೆಯ ರೂಪದಲ್ಲಿ ಬಾನಿನಿಂದ ಬುವಿಗೆ ಇಳಿಯುವುದು. ಅವರವರ ಭಾವಕ್ಕೆ ತಕ್ಕಂತೆ ನೋವನ್ನೂ ನಲಿವನ್ನೂ ಕರುಣಿಸುವುದು. ಒಂದು ಹನಿಯಲಿ ಹರುಷ, ಒಂದು ಹನಿಯಲಿ ದುಗುಡ... ಯಾವ ಹೂವು ಯಾರ ಮುಡಿಗೋ... ಯಾರ ಅಂಗಳದಲ್ಲಿ ಯಾವ ಹನಿಯೋ...

ಯಾರು ಕೇಳಲಿ ಎಂದು ತಾನು ಹಾಡುವುದಿಲ್ಲ ಎಂದು ಮೈದಳೆವ ಮಳೆಯೆಂಬ ನಾದಲೀಲೆಯನ್ನು ಮನದುಂಬಿಕೊಳ್ಳುವ ಶ್ರೋತೃಗಳ ಸ್ಪಂದನವೂ ಬಗೆಬಗೆ. ರಸಿಕರು ಅರೆನಿಮೀಲಿತರಾಗಿ ದಿವ್ಯಗಾನವ ಆಲಿಸುವರು. ಭಾವೋತ್ಕರ್ಷದಲ್ಲಿ ವಾಹ್ ಎಂದು ತೊಡೆ ತಟ್ಟುವರು. ಹೊರಗಷ್ಟೇ ಅಲ್ಲ, ಎದೆಯೊಳಗೂ ಸುರಿಯುವುದು ಮಳೆ. ನೆನಪುಗಳ ಮೇಘಮಲ್ಹಾರದಲ್ಲಿ ಬಾಲ್ಯ ತಾರುಣ್ಯಗಳು ಜೀವಗೊಳ್ಳುವವು. ಯಾವುದು ಒದ್ದೆ, ಯಾವುದು ಬಿಸುಪು, ಹೇಳಲಾಗದ ಸ್ಥಿತಿಯಲ್ಲಿ ಮಳೆಯೊಳಗೆ ಹನಿಯಾಗುವರು, ಮಳೆಯೇ ತಾವಾಗುವರು. ಭಗ್ನಹೃದಯಿಗಳಿಗೆ ಮಳೆ ನೋವಾಗಿಯೂ ಇರಿಯುವುದು. ಆ ಗಾಯದಲ್ಲಿ ಹುಳುಗಳಂತೆ ಪತರಗುಟ್ಟುವ ಹಳೆಯ ನೆನಪುಗಳು. ಎಂದೋ ಸುರಿದ ಮಳೆಯ ತೇವ ಅಕ್ಷಯ ಪಾತ್ರೆಯ ಅಗುಳಿನಂತೆ ನಿರಂತರ ಹಿಂಬಾಲಿಸುವುದು. ಎದೆಯೊಂದಿಗೆ ಕಣ್ಣಂಚಲೂ ಇರುಚಲಿನ ಎಂಜಲು.

ಮಳೆ ಬಂದ ಕಾಲಕ್ಕೆ ಮಣ್ಣಿನ ಮಕ್ಕಳಿಗೆ ಹಿಗ್ಗು. ಮುಗಿಲಿನತ್ತ ದಿಟ್ಟಿ ನೆಟ್ಟು ಮೊರೆಯಿಟ್ಟದ್ದು ಎಷ್ಟು ಬಾರಿ? ಆ ಮೊರೆಗೆ ಒಲಿದಂತೆ ಇಳಿಯುತಿರುವ ಮಳೆಯನ್ನು ಎದೆಗಿಳಿಸಿಕೊಳ್ಳುವರು. ಮಳೆ ಹನಿಯೆನ್ನುವುದು ಬರಿಯ ಹನಿಯೇ? ಪ್ರತಿ ಹನಿಯೂ ಒಂದು ಜೀವದ ಬೀಜ. ಬಿತ್ತಿದ ಬೀಜದೊಂದಿಗೆ ಮಳೆ ಬೀಜವೂ ಮಿಲನಗೊಂಡಾಗಷ್ಟೇ ಮಣ್ಣ ಮಡಿಲಲ್ಲಿ ಜೀವದ ಚಿಗುರು. ಆ ಚಿಗುರು ಕೊನರಿದಷ್ಟೂ ಜಗದಲ್ಲಿ ಜೀವಸಂಚಾರ. ಮಳೆಯೆನ್ನುವುದು ಜೀವದ ಹೊಳೆಯಾಗುವುದು.

ಉಳ್ಳವರು ಶಿವಾಲಯವ ಮಾಡುವರು. ಸೂರು ಭದ್ರವಾಗಿದ್ದವರಿಗಷ್ಟೇ ಮಳೆಯು ಪ್ರಿಯವಾಗುವುದು. ಅಂಗಳದಲ್ಲಿ ಮಣ್ಣಕಣ್ಣುಗಳ ಚುಂಬಿಸುವ ಮಳೆ, ಮಣ್ಣೇ ಆಗಲು ಹಂಬಲಿಸುವ ಮಳೆ, ಸೂರಿನಲ್ಲಿ ಇಳಿದು, ಮನೆಯೊಳಗನ್ನೂ ಕಾಣಲು ತವಕಿಸುವುದು. ಕಾಣಬಹುದೇ ಮನೆಯೊಳಗನು? ಇಣುಕಬಹುದೇ ಮನದೊಳಗನು? ಮಳೆಯೆದುರು ಬೆತ್ತಲಾದಂತನ್ನಿಸಿ ಮನಸ್ಸು ಬೆಚ್ಚುವುದು. ಮೈ ಮುದುಡಿದಷ್ಟೂ ಮಳೆಯ ಬಾಹುಗಳು ಉದ್ದವಾಗುವವು. ಎಲ್ಲೋ ಮಗು ಅಳುತಾ ಇದೆ... ಸದ್ದಿರದ ಬಿಕ್ಕುಗಳ ಸುದ್ದಿಯುಂಟೆ? ಉರುಳಿಬಿದ್ದ ಮರ, ಉಡುಗಿಹೋದ ಸ್ವರ, ಕಳಚಿಬಿದ್ದ ಗೂಡು, ಕುಸಿದುಬಿದ್ದ ಸೂರು... ಮಳೆಯೇ ಮಲೆತು ನಿಂತ ಮಳೆಯನ್ನು ಮಳೆಯೆನ್ನಬಹುದೆ? ಮುನಿವವಳನ್ನು ಮಾಯಿಯೆನ್ನಬಹುದೆ?

ಮನುಷ್ಯರಷ್ಟೇ ಅಲ್ಲ, ಪ್ರಕೃತಿಯೂ ಮಳೆಗೀತಕ್ಕೆ ಮರುನುಡಿಯುವುದು. ಧಗೆಯಾರಿದ ನೆಲದ ಹೃದಯದಲ್ಲಿ ಚಿಮ್ಮುವುದು ಒಲವು. ಬೆಟ್ಟಗುಡ್ಡಬಯಲಿಗೆ ಅಭ್ಯಂಜನ. ಮಳೆ ಸಂಚಾರವಾದಲ್ಲೆಲ್ಲ ಹಸುರಿನ ಆವರಣ. ನಾಡಿಗೆ ಕಾಡಿಗೆ ಬಯಲಿಗೆ ಜೀವಪೂರಣ. ಕಟ್ಟೆಗಳಲ್ಲಿ ಗಂಗಾವತರಣ. ಇಳಿದುಬಂದ ಹಾಡು ಹೊಸ ರೂಪ ಪಡೆದಂತೆ ನದಿಗಳ ಗಾನ–ನಾಟ್ಯ ರಸಧಾರೆ. ಧುಮ್ಮಿಕ್ಕುವ ಜಲಪಾತಗಳ ಪ್ರಭಾತಫೇರಿ. ಗಿಡಗಂಟೆಗಳ ಎಲೆ ಎಲೆಗಳಲೂ ಮಳೆ ಮುತ್ತು. ಆ ಮುತ್ತೇ ಹೂವಾದಂತೆ ಚೆಲ್ಲವರಿದಿದೆ ಚೆಲುವು. ಕೀಟಲೋಕಕ್ಕೆ ಹಾಡುವ ಉಮೇದು. ಮೋಹನ ಮುರಲಿಗೆ ಓಗೊಡುತ್ತಿವೆ ಮಂಡೂಕ ಸಾಮ್ರಾಜ್ಯ. ಕಿಟಕಿಯಿಂದ ಕಾಣುವ ಮರದ ಗೆಲ್ಲೊಂದರ ಮೇಲೆ ಕೂತ ಒಂಟಿ ಹಕ್ಕಿ ಜೋಡಿ ರೆಕ್ಕೆಗಳ ಬಿಡಿಸಿ ಒದ್ದೆ ಪುಕ್ಕಗಳ ಒದರುತ್ತಿದೆ. ಆ ಕ್ಷಣ ನೀರ ಹನಿಗಳು ಹಾರುವವು. ರೆಕ್ಕೆ ತೊರೆದ ಪುಕ್ಕವೊಂದು ತೂಕಡಿಸುತ್ತ ಮಣ್ಣ ಸೇರುವುದು, ಕೆನ್ನೀರಲಿ ದೋಣಿಯಾಗಿ ತೇಲುವುದು. ಅಮ್ಮನಂಥ ಮರದ ಗೆಲ್ಲಿನ ಮೇಲೆ ಜೂಕರಿಸುತ್ತ ಕೂತ ಆ ಹಕ್ಕಿಯ ಗೂಡು ಎಲ್ಲಿದೆ? ಆ ಗೂಡಿನ ಕಂಡಿಗೆ ರೆಕ್ಕೆ ಬಲಿಯದ ಜೀವದ ಕಣ್ಣುಗಳು ನೆಟ್ಟಿರಬಹುದೆ? ಗುಟುಕಿಗಾಗಿ ಜೀವ ಹಿಡಿದುಕೊಂಡಿರಬಹುದೆ? ಮಳೆಯೇ ಹಾಯಿಯಾಗು. ತಲ್ಲಣಿಸುವ ಜೀವಗಳಿಗೆ ಮಾಯಿಯಾಗು.

‘ಮತ್ತೆ ಮಳೆ ಹೊಯ್ಯುತಿದೆ ಎಲ್ಲ ನೆನಪಾಗುತಿದೆ... ಸುಖ ದುಃಖ ಬಯಕೆ ಭಯ ಒಂದೇ ಎರಡೇ...’

ಒಂದಾಗಿ ಎರಡಾಗಿ ನೂರು ಸಾವಿರವಾಗಿ ಲಕ್ಷ ಕೋಟಿಯಾಗಿ ಅಗಣಿತ ಬೀಜಗಳಾಗಿ ಮಳೆ ಸುರಿಯುತ್ತಿದೆ. ಬಿತ್ತಿದ ಬೀಜಗಳೆಲ್ಲ ಕಣ್ಣುಬಿಡುವವೆ? ಮಳೆ ಬೀಜ ಮಣ್ಣು ಸೇರದೆ ಹೋದರೆ, ಅಂಕುರದ ಪ್ರಶ್ನೆಯಾದರೂ ಎಲ್ಲಿ? ಮಣ್ಣ ಬಸಿರಿಗೆ ಎಷ್ಟೊಂದು ತಡೆಗಳು? ಮಣ್ಣು ಕಂಡಲ್ಲೆಲ್ಲ ನಾಗರಿಕತೆಯ ಕಾಂಕ್ರೀಟು! ಬೇರುಗಳ ಹಿಡಿದು ಜೋಕಾಲಿಯಾಡುತ್ತ ಮಣ್ಣಿನಾಳಕ್ಕೆ ಇಳಿಯುತ್ತ ಇಳಿಯುತ್ತ ಆಳದಲ್ಲೆಲ್ಲೋ ಅಂತಃಕರಣ ಮೈಗೂಡಿಸಿಕೊಳ್ಳುತ್ತ ಅಂತರ್ಜಲವಾಗುವುದು ಮಳೆಹನಿಯ ಸಾರ್ಥಕತೆ. ಆದರೆ, ಆ ನೀರ ಓಟಕ್ಕೆಲ್ಲಿದೆ ತಾವು? ಕೊಳಕು ಚರಂಡಿಗಳಲ್ಲಿ ಉಸಿರುಗಟ್ಟುವುದು ಮಳೆನೀರು. ಅಪಸ್ವರ ಮೂಡಿ ಜೀವಧ್ವನಿ ಕರ್ಕಶಗೊಳ್ಳುವುದು. ಒಡೆದ ಭ್ರೂಣಗಳಂತೆ ಮಳೆನೀರು ಕೊನೆಯುಸಿರೆಳೆಯುವುದು. ಮಣ್ಣು ಮೌನದಲಿ ಬಿಕ್ಕುವುದು.

ಮತ್ತೆ ಮಳೆ ಹೊಯ್ಯುತಿದೆ... ಮಳೆಪಾಠಗಳ ಹಾಳೆಗಳು ಚೆಲ್ಲಾಪಿಲ್ಲಿಯಾಗಿವೆ... ಆ ಹಾಳೆಗಳು ಹರಿವ ಮುನ್ನ ಅರಿವು ನಮ್ಮದಾಗುವುದೆ?

■ **ಚಂಪಕಮಾಲಾ**

## ಮಾತೇ ಮುತ್ತು

- ಸಂತೋಷ ಹೊರಗಿನಿಂದ ಬರುವುದಿಲ್ಲ. ಅದನ್ನು ನಮ್ಮ ಮನಸ್ಸಿನಲ್ಲಿ ನಾವು ಕಂಡುಕೊಳ್ಳಬೇಕು.
  —ಚದುರಂಗ
- ಜಾತಿ ಜಾತಿಯೊಳಗೆ ಜನಕೆಲ್ಲ ಹಗೆ, ಹೆರರಿಗಿದು ನಗೆ, ನಮಗಿದು ಧಗೆ.
  —ಪಂಜೆ ಮಂಗೇಶರಾವ್
- ಪ್ರತಿಫಲದ ಅಪೇಕ್ಷೆಯಿಲ್ಲದೆ ಕೇವಲ ಆತ್ಮತೃಪ್ತಿಗಾಗಿ ಕೆಲಸ ಮಾಡಿದಾಗ, ಮೋಸ ಹೋದಾಗಲೂ ದುಃಖವಾಗುವುದಿಲ್ಲ.
  —ಡಿ.ವಿ. ಗುಂಡಪ್ಪ
- ಅನುಭವದ ಕೊರತೆ ಮತ್ತು ಅಜ್ಞಾನದಿಂದ ಕೆಲಸ ಕೆಡುತ್ತದೆ. ಅಪಾಯ ಎದುರಾಗುತ್ತದೆ.
  —ತಿರುಮಲೆ ರಾಜಮ್ಮ
- ಚೆಲವು ನಮ್ಮ ಜೀವನ/ ಪಯಣವೆಲ್ಲ ಪಾವನ.
  —ಕೆ.ಎಸ್. ನರಸಿಂಹಸ್ವಾಮಿ
- ನಾನು ಬೇರೆ– ದೇಹ ಬೇರೆ ಎಂದು ತಿಳಿವು ತಂದುಕೊಂಡರೆ ರೋಗದ ಬಾಧೆಯು ಅತ್ಯಲ್ಪವಾಗುತ್ತದೆ.
  —ಎಂ.ವಿ. ಸೀತಾರಾಮಯ್ಯ
- ಜ್ಞಾನಕ್ಕೆ ವಿದ್ಯೆ, ವಿದ್ಯೆಗೆ ಓದು ಬರಹ ತಳಹದಿ.
  —ಬಿ.ಎಂ. ಶ್ರೀಕಂಠಯ್ಯ
- ದುಡಿಮೆಯಲ್ಲಿ ಸೇವಾ ಬುದ್ಧಿಯಿರಲಿ.
  —ಸರ್. ಎಂ. ವಿಶ್ವೇಶ್ವರಯ್ಯ
- ಮತ್ತೊಬ್ಬನ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ, ನಮ್ಮದೇ ಹುಚ್ಚುತನ ನಮಗೆ ಕಾಣಿಸುತ್ತದೆಯೇ?
  —ಶಿವರಾಮ ಕಾರಂತ
- ಸತ್ಯದ ದರ್ಶನವಾಗಬೇಕು ಎಂದರೆ ಅಹಂಕಾರ ವಿಸರ್ಜನೆಯಾಗಬೇಕು.
  —ತ.ರಾ. ಸುಬ್ಬರಾವ್